ಶ್ರೀ ಎಂ. ಪಿ. ಪಾಟೀಲ್.—ಇಂಡಿಯಾ ಸರ್ಕಾರದವರು ಇಕ್ವಿಪ್ಮೆಂಟ್ ಕೊಟ್ಟಿದ್ದಾರೆ. ಆ ಪ್ರಕಾರ ಪರಿಶೀಲಿಸಲ್ಪಡುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇಂಡಿಯಾ ಸರ್ಕಾರದವರು ಸೂಚಿಸಿರುವುದಲ್ಲದೆ ಇನ್ನೇನಾದರೂ ಬೇರೆ ಕ್ರಮ ಅನುಸರಿಸಿದ್ದಾರೆಯೇ?

Sri M. P. PATIL.—As far as I know, there is no deviation. Suppose there is any deviation in any particular case, the Government will examine it. Government have not yet taken a decision and they have not received the recommendations. After the recommendations of the Committee are received, Government will decide and if there is any deviation, that will be considered by the Government.

Sri M. N. NAGHNOOR.—Is it not a fact that the northern Karnatak officials have got greater powers and greater position as compared to Mysore officials?

Sri M. P. PATIL.—That is the view of some of the officers from the Bombay area.

Sri D. DEVARAJ URS.—Is it not a fact that some of the members of this Committee are the very persons who are responsible for preparing the provisional seniority list of officers?

Sri M. P. PATIL.—Some of them are members of the Committee.

Sri D. DEVARAJ URS.—In view of the answer given, do the Government feel that these very persons who are responsible for the provisional seniority list will do justice in the existing Committee on the representations made by several officers?

Sri M. P. PATIL.—The members of the Committee are not the final authority. The members are there; in addition, the help of the Government of India officers also is taken. They are also sitting in the Committee. After all, the Committee is going to submit recommendations to Government and Government is going to Consider every question and decide.

ಶ್ರೀ ಎ. ಜೆ. ಹೊಡ್ಡಮೇಟಿ.—ಈ ವಿಚಾರವನ್ನು ಪರಿಶೀಲನೆ ಮಾಡಲು ಒಂದು ಸಮಿತಿ ನೇಮಕವಾಗಿದೆ, ಸಮಿತಿ ಸದಸ್ಯರ ತಪಶೀಲು ಹೇಳುವುದಕ್ಕೆ ಈಗ ಸಾಧ್ಯವಿಲ್ಲವೆಂದು ಶ್ರೀ ಮೂಡಲಗಿರಿಗೌಡರ ಪ್ರಶ್ನೆಗೆ ಉತ್ತರವಾಗಿ ಹೇಳಿದರು. ಆ ಸಮಿತಿಯಲ್ಲಿ ಹಳೆಯ ಮೈಸೂರಿನವರು, ಹೊಸ ಮೈಸೂರಿನವರು ಇಬ್ಬರೂ ಇದ್ದಾರೆಯೆ?

ಶ್ರೀ ಎಂ. ಪಿ. ಪಾಟೀಲ್.—ಆ ಸಮಾಚಾರ ತರಿಸಿ ಒದಗಿಸಬೇಕಾಗಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಸರ್ಕಾರದವರು ಇದು ಆಖ್ಯೆರು ಪಟ್ಟಿಯಲ್ಲ, ಮತ್ತೆ ನಾವು ನೋಡುತ್ತೇವೆಂದು ಹೇಳಿದರು. ತಪಶೀಲಾಗಿ ನೋಡುತ್ತಾರೋ ಅಥವಾ ಶಿಫಾರಸಿನ ಮೇರೆ ನೋಡುತ್ತಾರೋ?

ಶ್ರೀ ಎಂ. ಪಿ. ಪಾಟೀಲ್.—ತಪಶೀಲಾಗಿ ನೋಡುತ್ತಾರೆ.

ಶ್ರೀ ಟಿ. ಹನುಮಯ್ಯ.—ನಾರ್ತ್-ಗೆಜೆಟೆಡ್ ಆಫೀಸರುಗಳಲ್ಲಿ 75 ರೂಪಾಯಿಗಳ ಸಂಬಳದವರ ಕೈಕೆಳಗೆ 300 ರೂಪಾಯಿಗಳ ಸಂಬಳದವರಿದ್ದಾರೆಯೆ?

ಅಧ್ಯಕ್ಷರು —ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಈಗ ಐದು ಸಂಸ್ಥಾನಗಳ ಭಾಗಗಳ ವಿಲೀನೀಕರಣವಾಗಿರುವುದರಿಂದ ಆಫೀಸರುಗಳಿಗೆ ಅತೃಪ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಅಧ್ಯಕ್ಷರು.—ಅತೃಪ್ತಿಯಾಗಿದೆಯೆಂದು ತಿಳಿದು ಬಂದಿದೆ ಎಂದು ಅದಕ್ಕೆ ಉತ್ತರ ಕೊಟ್ಟಿದ್ದಾರೆ.

Sri K. MALLAPPA.—May I know whether it is a fact that the officers from the State of Coorg have been placed under a disability on account of its small size?

Sri M. P. PATIL.—That is not the case. While equating the posts, all the factors have been taken into consideration.

Sri B. K. PUTTARAMIYA.—Where was the necessity for the Government to appoint this Committee?

Sri M. P. PATIL.—The Committee has to examine the representations. Notes have to be drawn; various points have to be pointed out to the Government. So all these preparations are to be made and Government have to consider them.

Charging of Excess Water Rate under Vani Vilas Sagar Atchkat.

Q.—210. Sri K. KENCHAPPA (Hiriyur).—

Will the Government be pleased to state:—

(*a*) whether they are aware that owners of lands which are supplied with water of Vani Vilas Sagar Channels, cultivating paddy and sugarcane are being made to pay excess water rate at Re. 1 per acre and the cesses on this amount unauthorisedly between 1st February 1945 to 24th February 1947

(SRI K. KENCHAPPA)

and subsequent to 24th February 1952 till today;

(*b*) whether they will now order for refund of this excess amount unauthorisedly collected from each raiyat (including at this rate on Takrar Thakta, orders for unauthorised cultivation since two to four times the water rate was ordered to be collected with cesses);

(*c*) whether it is a fact that water rate at Rs. 5-8-0 per acre and cesses on this amount are being levied to all lands irrigated by Vani Vilas Sagar Channel water irrespective of the consideration of the kind of crops grown and are being collected this year and last year unauthorisedly including on lands owned under Takrar Thakta for unauthorised use of water and by adopting this method the raiyats are harassed?

A.—Sri M. P. PATIL (Minister for Revenue).—

(*a*) The levy of excess water rate of Re. 1 per acre and the cesses thereon levied between 1st February 1945 to 24th February 1947 has been regularised by G. O. No. R. 8078-82/L.R. 221-46-2, dated 24th February 1947. The same rate is being continued.

(*b*) The question of refund does not arise as there is no unauthorised levy.

(*c*) Water rate at Rs. 5-8-0 per acre has been booked on lands raised with paddy and sugarcane and at Rs. 4-8-0 per acre on lands cultivated with other crops utilising the water of Vani Vilas Sagar till the end of 1955-56 and thereafter at Rs. 5-8-0 per acre on all lands irrespective of the crops raised.

ಶ್ರೀ ಕೆ. ಕೆಂಚಪ್ಪ—ಈ ಪ್ರಶ್ನೆಯಲ್ಲಿ (*a*)ಗೆ ಉತ್ತರವಾಗಿ, ಅದೇ ಹುಕುಮಿನ ದರವನ್ನು ಮುಂದುವರಿಸಲಾಗಿದೆ ಎಂದು ಕೊಟ್ಟಿದೆ. ಆದರೆ (*c*)ಗೆ ಉತ್ತರವಾಗಿ ಎಕರೆಗೆ ಐದು ರೂಪಾಯಿ ಎಂಟು ಆಣೆಯಂತೆ ಎಲ್ಲಾ ಜಮೀನುಗಳ ಮೇಲೂ 1956ರಿಂದ ತೆರಿಗೆಯನ್ನು ವಿಧಿಸಲಾಗಿದೆ, ಕೊಟ್ಟಿದೆ ಎಂದಮೇಲೆ, ಅನಧಿಕೃತವಾಗಿ ಎಕರೆಗೆ ಒಂದು ರೂಪಾಯಿ ಹೆಚ್ಚಾಗಿ ವಸೂಲು ಮಾಡುತ್ತಿದೆ ಎಂಬುದು ವ್ಯಕ್ತವಾಗುವುದಿಲ್ಲವೇ?

ಶ್ರೀ ಎಂ. ಪಿ. ಪಾಟೀಲ್.—ಹಾಗೆ ಆಗುವುದಿಲ್ಲ. In 1947, an assurance was given that the rate would not be increased. But the order was not issued. The rate was not increased. But the rate of Rs. 5-8-0 was fixed after the order was issued.

ಶ್ರೀ ಕೆ. ಕೆಂಚಪ್ಪ.—1947ನೆಯ ಇಸವಿಯಿಂದ 1950ರವರೆಗೆ ಇರುವ ಆರ್ಡರ್‌ನಲ್ಲಿ ಭತ್ತಕ್ಕೆ ಮತ್ತು ಕಬ್ಬಿಗೆ ಮಾತ್ರ ಎಕರೆಗೆ ಐದು ರೂಪಾಯಿ ಎಂಟು ಆಣೆ ಇರಬೇಕು, ಬಾಕಿಯದಕ್ಕೆಲ್ಲಾ ನಾಲ್ಕು ರೂಪಾಯಿ ಎಂಟು ಆಣೆ ಇರಬೇಕು ಎಂದಿದೆ. ಇನ್ನೊಂದು ಆರ್ಡರ್ ಇಲ್ಲದಿರುವಾಗ 1952ರಿಂದ ಈಚೆಗೆ ಪ್ರತಿಯೊಂದು ಜಮೀನಿಗೂ ಎಕರೆಗೆ ಐದು ರೂಪಾಯಿ ಎಂಟು ಆಣೆಯಂತೆ ವಿಧಿಸಿ, ಒಂದು ರೂಪಾಯಿ ಹೆಚ್ಚಿಗೆ ವಸೂಲು ಮಾಡುವುದು ಅನಧಿಕೃತವಲ್ಲವೇ?

ಶ್ರೀ ಎಂ. ಪಿ. ಪಾಟೀಲ್.—ಆ ಪ್ರಕಾರ ಗವರ್ನ್‌ಮೆಂಟ್ ಆರ್ಡರ್ ಇದೆಯೇ?

ಶ್ರೀ ಕೆ. ಕೆಂಚಪ್ಪ.—ಆ ರೀತಿ ಗವರ್ನ್‌ಮೆಂಟ್ ಆರ್ಡರ್ ಇದ್ದರೆ?

ಶ್ರೀ ಎಂ. ಪಿ. ಪಾಟೀಲ್.—ನನಗೆ ಬರೆಯಬಹುದು ನಾನು ಉತ್ತರ ಕೊಡುತ್ತೇನೆ.

ಶ್ರೀ ಕೆ. ಕೆಂಚಪ್ಪ.—(*a*)ನಲ್ಲಿ, the same rate is being continued ಎಂದು ಇದೆ. ಹಾಗಿದ್ದರೆ, ಭತ್ತ ಮತ್ತು ಕಬ್ಬನ್ನು ಬೆಳೆಯುವ ಜಮೀನುಗಳ ಮೇಲೆ ಒಂದು ರೂಪಾಯಿ ಜಾಸ್ತಿ ವಸೂಲು ಮಾಡಿದ್ದು ಅನಧಿಕೃತವಾಗುವುದಿಲ್ಲವೇ? ಹಾಗೆ ಮಾಡಿದ್ದು ಯಾವ ಹುಕುಮಿನ ಪ್ರಕಾರ?

Sri M. P. PATIL.—According to G. O. No. 8078-82/L.R. 22-46-2, dated 24th February 1947. 'The same rate is being continued after 1947' means that it was continued until the order fixing Rs. 5-8-0 was issued.

ಶ್ರೀ ಕೆ. ಕೆಂಚಪ್ಪ.—1947ನೆಯ ಇಸವಿ ಆರ್ಡರ್ ಪ್ರಕಾರ, ಎಲ್ಲಾ ಜಮೀನುಗಳಿಗೂ ಎಕರೆಗೆ ಐದು ರೂಪಾಯಿ ಎಂಟು ಆಣೆ ಎಂದಿದೆ. ಹಾಗಾದರೆ, ಭತ್ತ ಮತ್ತು ಕಬ್ಬು ಬೆಳೆಯುವ ಜಮೀನುಗಳಿಗೆ ಮಾತ್ರ ಐದು ರೂಪಾಯಿ ಎಂಟು ಆಣೆ ವಿಧಿಸಿದೆ ಎನ್ನುವುದು ನಿಜವೋ, ನುಳ್ಳೋ?

Sri M. P. PATIL.—If that is the contention of the Hon'ble Member, I shall make enquiries in the matter.

ಶ್ರೀ ಕೆ. ಕೆಂಚಪ್ಪ.—ನಾನು ತಮ್ಮ ಗೌರ್ನ್‌ಮೆಂಟ್ ಆರ್ಡರನ್ನೇ ಓದಿ ಹೇಳುತ್ತಿದ್ದೇನೆ. ತಾವೇ ಗೌರ್ನ್‌ಮೆಂಟ್ ಆರ್ಡರ್ ಓದಿ ಹೇಳಿ ಸ್ವಾಮಿ. ತಾವೇ ಕೊಟ್ಟಿರುವ ಗೌರ್ನ್‌ಮೆಂಟ್ ಆರ್ಡರ್ ಇದು. ಬರೀ ಪ್ಯಾಡಿ ಮತ್ತು ಷುಗರ್‌ಕೇನ್ ತಮ್ಮ ಗೌರ್ನ್‌ಮೆಂಟ್ ಆರ್ಡರಲ್ಲಿದೆ.

ಅಧ್ಯಕ್ಷರು.—ಪ್ರಶ್ನೆ ಕೇಳಿದ್ದಕ್ಕೆ ಸಮಾಚಾರ ದೊರಕುತ್ತದೆ. ಏನಾದರೂ ವ್ಯತ್ಯಾಸವಿದ್ದರೆ, ಅಸೆಂಬ್ಲಿಯಲ್ಲಿ ಇತ್ಯರ್ಥಮಾಡುವ ಕೆಲಸ ಅದಲ್ಲ. ಅದನ್ನು ಮಂತ್ರಿಗಳ ಛೇಂಬರ್‌ನಲ್ಲಿ ಕೇಳಿ ಇತ್ಯರ್ಥಮಾಡಿ.

ಶ್ರೀ ಕೆ. ಕೆಂಚಪ್ಪ.—1940ನೆಯ ಇಸವಿ ಆರ್ಡರ್ ಪ್ರಕಾರ, ಐದು ವರ್ಷಕ್ಕೆ ಮಾತ್ರವೇ ಅದು ಅನ್ವಯಿಸುತಕ್ಕದಲ್ಲವೇ, ಸ್ವಾಮಿ?

ಶ್ರೀ ಎಂ. ಪಿ. ಪಾಟೀಲ್.—ಹೌದು. ಅಷ್ಯೂರೆನ್ಸ್ ಏನೋ ಕೊಟ್ಟಿದೆ ಹೆಚ್ಚಾಗಿ ಮಾಡುವುದಿಲ್ಲವೆಂದು. ಹೆಚ್ಚಿಗೆ ಮಾಡದೆ ಇದ್ದರೆ ಅದೇ ಕಂಟಿನ್ಯೂ ಆಗಿದೆ. Even though no orders have been issued, the same settlement continues.

Sri T. SUBRAMANYA.—I have a suggestion to make.

Sri J. B. MALLARADHYA.—Is this the time for making a statement?

Sri T. SUBRAMANYA.—If out of the answers given by the Hon'ble Minister, the Leader of the Opposition finds that there are inconsistencies he may raise them in a half hour debate instead of reading the Government Order here and the House also might be benefited.

Mr. SPEAKER.—The Hon'ble Member may raise a half hour debate on this question or he may meet the Hon'ble Minister and settle it or he may give notice of a Short Notice Question and I will see it I can admit it.

ಶ್ರೀ ಎಂ. ಪಿ. ಪಾಟೀಲ್.—1952ಕ್ಕೆ ಆರ್ಡರ್ ಮುಗಿದುಹೋಯಿತು. ಆದರೆ ಇತ್ತೀಚೆಗೆ ಅದೇ ಪ್ರಕಾರ ವನೂಲು ಮಾಡುವುದು ತಪ್ಪಾಗುವುದಿಲ್ಲ.

ಶ್ರೀ ಕೆ. ಕೆಂಚಪ್ಪ.—ಈಗ ಲ್ಯಾಂಡ್ ರೆವಿನ್ಯೂ ಕೋಡ್ 115ರ ಪ್ರಕಾರ ಎಂದು ಹೇಳಿದೆ. 115ರ ಪ್ರಕಾರವೋ, 116ರ ಪ್ರಕಾರವೋ?

ಶ್ರೀ ಎಂ. ಪಿ. ಪಾಟೀಲ್.—ರೂಲ್ಸ್ ಪ್ರಕಾರ 33 (b) ಮತ್ತು 34.

2 P.M.

ಶ್ರೀ ಕೆ. ಕೆಂಚಪ್ಪ.—ಲ್ಯಾಂಡ್ ರೆವೆನ್ಯೂ ಕೋಡಿನ ಯಾವ ಸೆಕ್ಷನ್ ಪ್ರಕಾರ ಮಾಡಿದ್ದೀರೆಂದು ಕೇಳುತ್ತಿದ್ದೇನೆ.

ಶ್ರೀ ಎಂ. ಪಿ. ಪಾಟೀಲ್.—ಸೆಕ್ಷನ್ ನಂಬರು ಏನು ಎಂದು ನೀವು ನೋಡಿರಬಹುದು. ನಾನು ನೋಡಿ ಹೇಳಬೇಕು.

Mr. SPEAKER.—Question time is over. Sri G. Sivappa's question will be taken up tomorrow.

QUESTIONS FOR ANSWERS ON THE DAY

(but not taken up.)

Appointment of Qualified Director to the Department of Indian Medicine.

Q.—1636. Sri M. MALLIKARJUNASWAMY (Malavalli).—

Will the Government be pleased to state :—

(*a*) when was the Department of Indian Medicine established;

(*b*) the Head of the Department at the time of formation;

(*c*) the persent Head of the Department;

(*d*) whether he is qualified in Indian Medicine;

(*e*) whether they would appoint a whole-time officer of experience who is qualified in the Ayurvedic and Unani systems of medicine as the Director of Indian Medicines?

A.—Sri R. M. PATIL (Minister for Health).—

(*a*) On 2-2-1950.

(*b*) The Minister for Public Health

(*c*) The Director of Medical Services in Mysore, Bangalore.

(*d*) No.

(*e*) This will be examined.

Clerks from the Ex-Mudhol and Jamkhandi States absorbed in the Revenue Department of Bijapur District.

Q.—1751. Sri H. B. SHAH (Mudhol).—

Will the Government be pleased to state :—

(*a*) the number of clerks from Ex-Mudhol and Jamkhandi States, absorbed in the Revenue Department of Bijapur District of the Ex-Bombay State;

(*b*) the categories in which those clerks were absorbed?

A.—Sri M. P. PATIL (Minister for Revenue).—

(*a*) Ex-Jamkhandi State... 27
Ex-Mudhol State ... 19

(*b*) Clerks and Talathies.

ADJOURNMENT MOTIONS.

Mr. SPEAKER.—I have received three adjournment motions. I have fixed 10th instant for taking them up. I would like to know the views of the Government in this respect before I decide whether I should allow or disallow them.